# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

### ಹವಾಮಾನ ಮುನ್ಸೂಚನೆಯ ಅವಧಿ 20-07-2022 ರಿಂದ 24-07-2022

ಸಂ. ಗ್ರಾ.ಕೃ.ಹ.ಸೇ.ಬ/055/2022 ದಿನಾಂಕ: 19.07.2022

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 20-07-2022 ರಿಂದ 24-07-2022 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ–1 (20.07.2022) | ದಿನ–2 (21.07.2022) | ದಿನ–3 (22.07.2022) | ದಿನ–4 (23.07.2022) | ದಿನ–5 24.07.2022) | | |
| ಮಳೆ ಪ್ರಮಾಣ (ಮಿ.ಮೀ.) | 22 | 20 | 17 | 16 | 12 | 148.1 | 87↓ |
| ಗರಿಷ್ಠ ಉಷ್ಣಾಂಶ (°C) | 30 | 30 | 30 | 30 | 30 | 28.2 | 30↑ |
| ಕನಿಷ್ಠ ಉಷ್ಣಾಂಶ (°C) | 24 | 24 | 24 | 24 | 24 | 22.2 | 24↑ |
| ಮೋಡದ ಹೊದಿಕೆ (ಒಕ್ಟಾ) | 8 | 8 | 8 | 8 | 8 | 7 | 8↑ |
| ಗರಿಷ್ಠ ಆರ್ದ್ರತೆ (ಶೇ.) | 96 | 96 | 96 | 94 | 94 | 96 | 95.2↓ |
| ಕನಿಷ್ಠ ಆರ್ದ್ರತೆ (ಶೇ.) | 95 | 95 | 95 | 94 | 72 | 93 | 90.2↓ |
| ಗಾಳಿಯ ವೇಗ (Kmph) | 4 | 3 | 4 | 3 | 3 | 6.6 | 3.4↓ |
| ಗಾಳಿಯ ದಿಕ್ಕು (°) | 210 | 279 | 279 | 206 | 285 | 244 | 252↑ |
| ಮುನ್ಸೂಚನೆ | R+/ TSH | NIL | NIL | NIL | NIL | **Heavy rainfall** at isolated places very likely over **CoastalKarnataka** during next 24 hours. | |
| ಸಂಭವನೀಯತೆ (%) | >75% | >75% | >75% | >75% | >75% | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 24.07.2022 ರಿಂದ 30.07.2022 ರವರೆಗೆ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತಾವರಣವಿರಲಿದ್ದು ಜಿಲ್ಲೆಯಾದ್ಯಂತ ಒಂದೆರಡು ಕಡೆ ಗುಡುಗು ಮಿಂಚು ಸಹಿತ, ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **30°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **24°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **94%** ರಿಂದ **96%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **72%** ರಿಂದ **95%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **3-4** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 |
|---|---|---|---|---|---|---|---|---|---|---|---|---|---|
| Rainfall | 3790.4 | 3628.1 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 2226.2 |
| Rainy days | 110 | 128 | 105 | 127 | 112 | 107 | 119 | 121 | 112 | 123 | 126 | 152 | 65 |


Realised Rainfall (07th July to 13th July, 2022)




Rainfall Forecast Map (15th July to 21st July 2022)



Standardized Precipitation Index Outlook (16.06.2021 to 13.07.2022)



Normalized Difference Vegetation Index



# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| ಬೆಳೆ | ಕೃಷಿ ಸಲಹೆಗಳು |
|---|---|
| ಪೋಷಕಾಂಶ ನಿರ್ವಹಣೆ (ಕೃಷಿ ಸುಣ್ಣ) | ರೈತರು ಮಣ್ಣಿನ ತೇವಾಂಶವನ್ನಾಧಾರಿಸಿ ರಸಗೊಬ್ಬರ ನೀಡುವ 15–20 ದಿನಗಳ ಮುನ್ನ ಕೃಷಿ ಸುಣ್ಣ ಹಾಕುವುದು ಸೂಕ್ತವಾಗಿದೆ. |
| ನೀರಿನ ನಿರ್ವಹಣೆ | ಮುಂಗಾರು ಚುರುಕಾಗಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| ಅಡಿಕೆ (ಸುಳಿ ತಿಗಣೆ) | ರೈತರು ಸುಳಿ ತಿಗಣೆ ನಿರ್ವಹಣೆ ಮಾಡಲು 1.7 ಮಿ.ಲೀ ನಷ್ಟು ಡೈಮೆಥೋಯೇಟ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಸೂಕ್ತ. |
| ಅಡಿಕೆ (ಹಿಂಗಾರ ಒಣಗುವ ರೋಗ) | ರೈತರು ಹಿಂಗಾರ ಒಣಗುವ ರೋಗವನ್ನು ನಿಯಂತ್ರಣ ಮಾಡಲು ಮ್ಯಾಂಕೋಜೆಬ್ 3 ಗ್ರಾಂ ಪ್ರತಿ ಲೀಟರ್ ನೀರಿಗೆ ಮಿಶ್ರಿಸಿ ಸಿಂಪಡಿಸುವುದು ಸೂಕ್ತವಾಗಿದೆ. |
| ತೆಂಗು (ರೈನೋಸೊರೆಸ್ ದುಂಬಿ) | ಗೊಬ್ಬರದ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಬೇಕು.ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಝಿಯಂ ಅನಿಸೊಪ್ಲಿಯಾ) ಸೇರಿಸುವುದು. ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಕ್ಲೋರೋಫೈರಿಫಾಸ್ 10ಜಿ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.ರಂಧ್ರಗಳಿರುವ ಸಣ್ಣ ಪ್ಲಾಸ್ಟಿಕ್ ಚೀಲಗಳಲ್ಲಿ ಕ್ಲೋರೋಫೈರಿಫಾಸ್ 10ಜಿ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ ಇರಿಸುವುದು. ಪ್ರತೀ 25–30 ದಿನಗಳಿಗೊವ್ಮೆ ಬದಲಾಯಿಸುತ್ತಿರುವುದು.ಜೀರುಂಡೆಗಳನ್ನು ಬಲೆಗೆ ಬೀಳಿಸಲು ಮತ್ತು ಕೊಲ್ಲಲು ರೈನೋಲ್ಯೂರ್ ಫೆರೋಮೋನ್ ಬಲೆಯನ್ನು ಅಳವಡಿಸುವುದು. |
| ತೆಂಗು (ಕುರುವಾಯಿ ದುಂಬಿ) | ಕುರುವಾಯಿ ದುಂಬಿ ನಿಯಂತ್ರಣ ಮಾಡಲು ಕ್ಲೋರೊಫೈರಿಫಾಸ್ ಹರಳನ್ನು ಮರಳಿನ ಜೊತೆ 1:1 ಅನುಪಾತದಲ್ಲಿ ಮಿಶ್ರಣ ಮಾಡಿ ಸುಳಿ ಭಾಗಕ್ಕೆ ಹಾಕುವುದು. ಕುರುವಾಯಿ ಹುಳುಗಳನ್ನು ಸಂಗ್ರಹಿಸಿ ನಾಶಪಡಿಸುವುದು ಹಾಗೂ ತೆಂಗಿನ ತೋಟದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು. ಕುರುವಾಯಿ ದುಂಬಿಗಳ ಸಂತಾನೋತ್ಪತಿಯ ಮೂಲಗಳನ್ನು ಸಾಶಪಡಿಸುವುದು. |
| ತೆಂಗು (ಕಾಂಡ ಸೋರುವ ರೋಗ) | ಕಾಂಡ ಸೋರುವ ರೋಗ ನಿಯಂತ್ರಣ ಮಾಡಲು ರೈತರು ಕಾಂಡ ಭಾಗವನ್ನು ಕೆತ್ತಿದ ನಂತರ ಶೇಕಡ 1ರ ಬೋರ್ಡೋ ಪೇಸ್ಟನ್ನು ಹಚ್ಚಬೇಕು ಅಥವಾ 2 ಮಿ.ಲೀ ಹೆಕ್ಸಾಕೊನಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡಕ್ಕೆ ಸುರಿಯುವುದು (ಪ್ರತಿ ಮರಕ್ಕೆ 3ಲೀಟರ್) ಅದರ ಜೊತೆಗೆ ಪ್ರತಿ ಗಿಡಕ್ಕೆ 5 ಕೆ.ಜಿಯಷ್ಟು ಬೇವಿನ ಹಿಂಡಿಯನ್ನು ನೀಡುವುದು. |
| ಬಾಳೆ (ಸಾಮಾನ್ಯ ಸಲಹೆ) | 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು) |
| ಕಾಳುಮೆಣಸು (ಶೀಘ್ರ ಸೊರಗು ರೋಗ) | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ ಮಳೆ ನೀರು ನಿಲ್ಲದಂತೆ ಹರಿದು ಹೋಗಲು ಸೂಕ್ತ ಬಸಿಗಾಲುವೆ ವ್ಯವಸ್ಥೆ ಕಲ್ಪಿಸುವುದು. ಒಣಗಿದ ಹಾಗೂ ನೆಲದ ಮೇಲೆ ಹಬ್ಬಿರುವ ಬಳ್ಳಿಗಳನ್ನು ಕತ್ತರಿಸುವುದು ಸೂಕ್ತವಾಗಿದೆ. |
| ಗೇರು (ಕಾಂಡ ಕೊರಕ) | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ತಂತಿಯ ಸಹಾಯದಿಂದ ಶುಚಿಗೊಳಿಸಿ ನಂತರ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದನಂತರ 2 ಮಿ.ಲೀ. ಕ್ವಿನಾಲ್ಫಾಸನ್ನು ಪ್ರತಿ ಲೀಟರ್‌ನಲ್ಲಿ ಬೆರೆಸಿ ಸಿಂಪಡಿಸಬೇಕು. |
| ಗೇರು ಬೆಳೆಯಲ್ಲಿ ಎಲೆ ತಿನ್ನುವ ದುಂಬಿಗಳು | ಕೆಂಪು ಬಣ್ಣದ ದುಂಬಿಗಳು ಎಳೆಯ ಚಿಗುರುಗಳನ್ನು ಮತ್ತು ಎಲೆಗಳನ್ನು ತಿಂದು ಹಾಕುತ್ತವೆ. ಈ ಕೀಟ ಕಂಡುಬಂದಲ್ಲಿ ನಿರ್ವಹಣೆಗಾಗಿ ಮೊನೊಕ್ರೋಟೋಫಸ್ 1.5ಮಿ.ಲೀ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| ಮಲ್ಲಿಗೆ (ಎಲೆಚುಕ್ಕೆ ರೋಗ) | ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ. |

## ಕ್ಷೇತ್ರ ಬೆಳೆಗಳು:

| | |
|---|---|
| ಭತ್ತ (ನಾಟಿ ಸಮಯ) | ಭತ್ತ ನಾಟಿ ಮಾಡಲು ಸಮಯ ಸೂಕ್ತವಾಗಿದೆ. ಭತ್ತ ನಾಟಿ ಮಾಡುವ ಸಮಯದಲ್ಲಿ 17.5 ಕಿ. ಗ್ರಾಂ. ಯೂರಿಯಾ, 60 ಕಿ. ಗ್ರಾಂ. ಶಿಲಾರಂಜಕ ಮತ್ತು 13.5 ಕಿ. ಗ್ರಾಂ. ಮ್ಯೂರಿಯೆಟ್ ಆಫ್ ಪೊಟ್ಯಾಷ್ ಮತ್ತು 8 ಕಿ.ಗ್ರಾಂ., ಮೆಗ್ನೇಶಿಯಂ ಸಲ್ಫೇಟ್ ಗೊಬ್ಬರಗಳನ್ನು ಪ್ರತಿ ಎಕರೆಗೆ ಕೊಡುವುದು. ಮೂರು ವರ್ಷಕ್ಕೆ ಒಂದು ಬಾರಿ 8 ಕಿ. ಗ್ರಾಂ. ಜಿಂಕ್ ಸಲ್ಫೇಟ್ ಮತ್ತು 1 ಕಿ.ಗ್ರಾಂ ಬೊರಾಕ್ಸ್ ಗೊಬ್ಬರಗಳನ್ನು ಪ್ರತಿ ಎಕರೆಗೆ ಕೊಡುವುದು. |
| ಭತ್ತ (ಕಳೆ ನಿರ್ವಹಣೆ) | ➢ ಭತ್ತದಲ್ಲಿ ಉದಯ ಪೂರ್ವಕ ಕಳೆಗಳ ನಿರ್ವಹಣೆ ಮಾಡಲು, ಪೈರಾಜೋಸಲ್ಪುರಾನ್ ಈಥೈಲ್ 10ಡಬ್ಲ್ಯೂಪಿ 80ಗ್ರಾಂ ಕಳೆನಾಶಕವನ್ನು 10ಕಿ.ಗ್ರಾಂ ಮರಳಿನ ಜೊತೆಗೆ ಮಿಶ್ರಣ ಮಾಡಿ ಅಥವಾ ಪೆಂಡಿಮಿಥಾಲಿನ್ 3ಮಿ.ಲೀ ಪ್ರತಿ ಲೀಟರ್ ನೀರಿಗೆ ಅಥವಾ ಪರ್ಟಿಲಾಕಲೋರ್ 3ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರಸಿ ಭತ್ತ ನಾಟಿ ಮಾಡಿದ 3–5 ದಿನಗಳ ಒಳಗೆ 1 ಎಕರೆ ಭತ್ತದ ಗದ್ದೆಯಲ್ಲಿ ಎರಚಬೇಕು.<br>➢ ಭತ್ತದಲ್ಲಿ ನಾಟಿ ಮಾಡಿದ 15–20 ದಿನಗಳ ಅವಧಿಯಲ್ಲಿ ಬರುವ ಕಳೆಗಳಿಗೆ ಉದಯೋತ್ತರ ಕಳೆನಾಶಕವಾದ ಬಿಸ್ಪೈರಿಬ್ಯಾಕ್ ಸೋಡಿಯಂ 10% ಎಸ್.ಸಿ@ 0.4ಮಿ.ಲೀ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. (ಸೂಚನೆ: ಕಳೆಗಳು 2–4 ಎಲೆಗಳು ಇದ್ದಲ್ಲಿ ಪರಿಣಾಮಕಾರಿ)<br>➢ ಭತ್ತದಲ್ಲಿ ನಾಟಿ ಮಾಡಿದ 15–20 ದಿನಗಳ ಅವಧಿಯಲ್ಲಿ ಅಗಲ ಜಾತಿಯ ಕಳೆಗಳು ಕಂಡುಬಂದರೆ ಉದಯೋತ್ತರ |

| | |
|---|---|
| | ಕಳೆನಾಶಕವಾದ 2,4–ಡಿ 80ಡಬ್ಲ್ಯೂ.ಪಿ (ಸೋಡಿಯಂ ಸಾಲ್ಟ್) @ 4 ಗ್ರಾಂ. ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. (ಸೂಚನೆ: ಕಳೆಗಳು 2–4 ಎಲೆಗಳು ಇದ್ದಲ್ಲಿ ಪರಿಣಾಮಕಾರಿ)<br>(ಸೂಚನೆ: 1 ಎಕರೆಗೆ ನೀರಿನ ಪ್ರಮಾಣ 120–150 ಲೀಟರ್) |

## ಜಾನುವಾರು ಸಲಹೆ:

| | |
|---|---|
| ಹಸು<br>(ಸಾಮಾನ್ಯ ಸಲಹೆ) | ➢ ಮಳೆಗಾಲವಾಗಿರುವುದರಿಂದ ಗುಡುಗು–ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಿ ಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➢ ಗಂಟಲು ಬೇನೆ & ಚಪ್ಪೆ ರೋಗ: ಈ ರೋಗಗಳು ಮುಂಗಾರು ಸಮಯದಲ್ಲಿ ಉಲ್ಬಣವಾಗುವ ಸಂಭವವಿರುವುದರಿಂದ ಜುಲೈ ತಿಂಗಳಿನಲ್ಲಿ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತವಾಗಿದೆ. |

## ಸಾಮಾನ್ಯ ಸಲಹೆ:

| | |
|---|---|
| ಮಳೆ ನೀರು ಕೊಯ್ಲು ಘಟಕ | ➢ ರೈತರು ತಮ್ಮ ಜಮೀನಿನಲ್ಲಿ ಈಗಾಗಲೇ ನಿರ್ಮಿಸಿರುವ ಮಳೆ ನೀರು ಕೊಯ್ಲು ಘಟಕಗಳನ್ನು ಸುಸ್ಥಿತಿಯಲ್ಲಿಡುವುದು. ಇದರಿಂದ ರೈತರು ಬೇಸಿಗೆಯಲ್ಲಿ ನೀರಿನ ಕೊರತೆ ಎದುರಿಸುವುದನ್ನು ತಗ್ಗಿಸಬಹುದು ಹಾಗೂ ತಮ್ಮ ಆದಾಯವನ್ನು ಹೆಚ್ಚಿಸಲು ಮೀನು ಸಾಕಾಣಿಕೆಯನ್ನು ಮಾಡಬಹುದಾಗಿದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.